ಮಂಡ್ಯ ಮತ್ತು ತಗ್ಗಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಸ್ಥಳಾವಕಾಶದ ಅಭಾವ ನೀಗಿಸಲು ಕೈಗೊಂಡ ಕ್ರಮದ ಬಗ್ಗೆ

1991(2549) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರಿ ಪದವಿ ಪೂರ್ವ ಕಾಲೇಜು, ಮಂಡ್ಯ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜು, ತಗ್ಗಹಳ್ಳಿ ಇಲ್ಲಿ ಸ್ಥಳಾವಕಾಶದ ಅಭಾವ ನೀಗಿಸಲು 2002-03ನೇ ಸಾಲಿನಲ್ಲಿ ಶೈಕ್ಷಣಿಕ ವರ್ಷದಲ್ಲಿ ಕ್ರಮಕೈಗೊಳ್ಳುವುದಾಗಿ ಸದನದಲ್ಲಿ ಆಶ್ವಾಸನೆ ನೀಡಲಾಗಿತ್ತೆ;

ಆ) ಹಾಗಿದ್ದಲ್ಲಿ ಅದೇ ರೀತ್ಯ ಕ್ರಮ ಕೈಗೊಳ್ಳಲಾಗಿದೆಯೇ;

ಇ) ಕ್ರಮ ಕೈಗೊಳ್ಳಲಾಗಿಲ್ಲದಿದ್ದಲ್ಲಿ, ಕಾರಣಗಳೇನು; ಯಾವಾಗ ಕ್ರಮ ಕೈಗೊಳ್ಳಲಾಗುತ್ತದೆ?

ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಹೌದು.

ಆ) ಮಂಡ್ಯ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು (ಕಲ್ಲು ಕಟ್ಟಡ) ಮಂಡ್ಯ ಇಲ್ಲಿಗೆ ರೂ. 10.00 ಲಕ್ಷಗಳನ್ನು, ಸರ್ಕಾರಿ ವಿಜ್ಞಾನ ಪದವಿ ಪೂರ್ವ ಕಾಲೇಜು (ಕಲ್ಲು ಕಟ್ಟಡ) ಮಂಡ್ಯ ಇಲ್ಲಿಗೆ ರೂ. 2.50 ಲಕ್ಷಗಳನ್ನು, ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗ, ತಗ್ಗಹಳ್ಳಿ, ಮಂಡ್ಯ ತಾಲ್ಲೂಕು, ಇಲ್ಲಿಗೆ ರೂ. 5.00 ಲಕ್ಷಗಳನ್ನು ಈ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಮಂಡ್ಯ ಜಿಲ್ಲಾ ಪಂಚಾಯತ್‌ನಲ್ಲಿ ವಿವೇಚನಾ ಕೋಟಾ ಅಥವಾ ಅನುದಾನದಡಿ ಶೀರ್ಷಿಕೆ 3054 ಕ್ಕೆ ಅನುದಾನ ಬಿಡುಗಡೆ

1992(2550) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡ್ಯ ಜಿಲ್ಲಾ ಪಂಚಾಯತ್‌ನ ಸಾಮಾನ್ಯ ಸಭೆಯ ತೀರ್ಮಾನದಂತೆ ಮಂಡ್ಯ ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ವಿವೇಚನಾ ಕೋಟಾ ಅಥವಾ ಅನುದಾನದಡಿಯಲ್ಲಿ ಶೀರ್ಷಿಕೆ 3054ರಲ್ಲಿ (ಎಲ್.ಓ.ಸಿ) ಅನುದಾನ ಬಿಡುಗಡೆ ಮಾಡುತ್ತಾ ಇದ್ದಾರೆಂದು ಸದನದಲ್ಲಿ ಲಿಖಿತ ಉತ್ತರದಲ್ಲಿ ತಿಳಿಸಲಾಗಿದೆಯೇ;

ಆ) ಜಿಲ್ಲಾ ಪಂಚಾಯತ್‌ನ ನಿಯಮಾವಳಿಗಳ ಅಡಿಯಲ್ಲಿ ಈ ರೀತಿ ಬಿಡುಗಡೆ ಮಾಡಲು ಅವಕಾಶವಿದೆಯೇ; ಮಂಡ್ಯ ಜಿಲ್ಲಾ ಪಂಚಾಯತ್‌ನಲ್ಲಿ ಬಿಡುಗಡೆ ಮಾಡುತ್ತಾ ಇರುವ ಅನುದಾನ ಪ್ರಕ್ರಿಯೆ ನಿಯಮಾವಳಿಗಳ ಪ್ರಕಾರ ಸಿಂಧುವೇ; ಇದು ಪಕ್ಷಪಾತಕ್ಕೆ ಅವಕಾಶ ಮಾಡಿಕೊಟ್ಟಂತೆ ಆಗುವುದಿಲ್ಲವೆ;

ಇ) ನಿಯಮಾವಳಿಗಳ ಪ್ರಕಾರ ಸಿಂಧುವಾಗದಿದ್ದಲ್ಲಿ, ಸರ್ಕಾರದ ಕ್ರಮ ಏನು; ಈ ರೀತಿ ವಿವೇಚನಾ ಕೋಟಾದ ಅಡಿ ಅನುದಾನ ಬಿಡುಗಡೆ ಮಾಡುವ ಪದ್ಧತಿ ರಾಜ್ಯದಲ್ಲಿ ಯಾವ್ಯಾವ ಜಿಲ್ಲಾ ಪಂಚಾಯತ್‌ನಲ್ಲಿ ಇದೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಹೌದು

ಆ) ಇಲ್ಲಾ, ಆದರೆ ದಿನಾಂಕ : 15.6.2002 ರಂದು ಮತ್ತು 7.8.2002 ರಂದು ನಡೆದ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಿದಂತೆ ಜಿಲ್ಲಾ ಪಂಚಾಯತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ 15% ಅನುದಾನವನ್ನು ವಿವೇಚನಾ ಕೋಟಾದಲ್ಲಿ ಬಿಡುಗಡೆ ಮಾಡಬಹುದಾಗಿರುತ್ತದೆ. ಇದರಲ್ಲಿ ಯಾವುದೇ ಪಕ್ಷಪಾತವಾಗುತ್ತಿಲ್ಲವೆಂದು ಜಿಲ್ಲಾ ಪಂಚಾಯತಿಯವರು ವರದಿ ಮಾಡಿರುತ್ತಾರೆ.

ಇ) ಜಿಲ್ಲಾ ಪಂಚಾಯತಿಗಳು ಕಾಮಗಾರಿಗಳನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಿ ಅನುಮೋದನೆಯಾದ ನಂತರ ಎಂ.ಎಂ.ಆರ್. ಪ್ರಕಾರ ಮಾಸಿಕ ಬೇಡಿಕೆಗನುಗುಣವಾಗಿ ಅನುದಾನವನ್ನು ಜಿಲ್ಲಾ ಪಂಚಾಯತಿಯವರು ಬಿಡುಗಡೆ ಮಾಡುತ್ತಾರೆ. ಮಂಡ್ಯ ಜಿಲ್ಲಾ ಪಂಚಾಯತ್ ಹೊರತುಪಡಿಸಿ, ಬೇರೆ ಯಾವುದೇ ಜಿಲ್ಲಾ ಪಂಚಾಯತಿಗಳು ಈ ರೀತಿ ವಿವೇಚನಾ ಕೋಟಾದಲ್ಲಿ ಅನುದಾನ ಬಿಡುಗಡೆ ಮಾಡುತ್ತಿಲ್ಲ.

ಅಥಣಿ ತಾಲ್ಲೂಕಿನಲ್ಲಿ ನೀರಿನ ತೊಂದರೆ ನೀಗಿಸಲು ಕೈಗೊಂಡ ಕ್ರಮದ ಬಗ್ಗೆ

1993(1799) ಶ್ರೀ ಭರಮಗೌಡ ಅ. ಕಾಗೆ (ಕಾಗವಾಡ) : ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯ ಕೃಷ್ಣ ನದಿಯ ನೀರು ಬತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಅಥಣಿ ತಾಲ್ಲೂಕಿನ ಕುಡಿಯುವ ನೀರು ಹಾಗೂ ದನ ಕರುಗಳಿಗೆ ನೀರಿನ ತೀವ್ರ ಅಭಾವವಿರುವುದರಿಂದ ಇದನ್ನು ನೀಗಿಸಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ?

ಶ್ರೀ ಕೆ.ಬಿ. ಕೋಳಿವಾಡ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು):

ಅ) ಬಂದಿದೆ.

ಆ) ಮಾರ್ಚ್- 2003ರ 2ನೇ ವಾರದಲ್ಲಿ ಮಹಾರಾಷ್ಟ್ರ ರಾಜ್ಯದ ಕಾಳಮ್ಮವಾಡ ಅಣೆಕಟ್ಟಿನಿಂದ ಕೃಷ್ಣ ನದಿಗೆ ನೀರು ಬಿಡುಗಡೆಯಾಗಿದ್ದು ಸದ್ಯಕ್ಕೆ ಅಥಣಿ ತಾಲ್ಲೂಕಿನಲ್ಲಿ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆಯಿರುವುದಿಲ್ಲ.

ಚಿತ್ತಾಪುರ ತಾಲ್ಲೂಕಿನ ಅಬನಾಯಕ್ ತಾಂಡಾ, ಹಿರೇಮಣಿ ತಾಂಡಾ, ಮುಂಗಿ ತಾಂಡಾ ಪ್ರಾಥಮಿಕ ಶಾಲೆಗಳ ಶಿಕ್ಷಕರು

1994(2447) ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಲ್ಬರ್ಗಾ ಜಿಲ್ಲೆಯ, ಸೇಡಂ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ಅಭಾನಾಯಕ್ ತಾಂಡಾ, ಹಿರೇಮಣಿ ತಾಂಡಾ, ಮುಂಗಿ ತಾಂಡಾ ಪ್ರಾಥಮಿಕ ಶಾಲೆಗಳಲ್ಲಿ ಮಂಜೂರಾಗಿರುವ ಶಿಕ್ಷಕರ ಸಂಖ್ಯೆ ಎಷ್ಟು ; ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ ಎಷ್ಟು ;

ಆ) ಈ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಹೆಸರು ಗಳೇನು;

(ಶಾಲಾವಾರು ನೀಡುವುದು)?

ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) 1. ಚಿತ್ತಾಪುರ ತಾಲ್ಲೂಕಿನ ಅಬಾನಾಯಕ ತಾಂಡದಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇದ್ದು ಎರಡು ಶಿಕ್ಷಕರ ಹುದ್ದೆಗಳು ಮಂಜೂರಾಗಿವೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ.